ಮಹಾ ಮಾತೃಶ್ರೀ
ವಾಣೀವಿಲಾಸ ಸನ್ನಿಧಾನ

ತಿರುಮಲ ತಾತಾಚಾರ್ಯ ಶರ್ಮ
ಸಂಪಾದಕ

'ವಿಶ್ವಕರ್ಣಾಟಕ'
೧೯೩೪

[ಬೆಲೆ ೬ ಪೈ

ದರೆಂಬ
ಸಂಚಿಕೆ
ಮಹಾ
ಟಿಸಿದು

ಶಿಕ್ಷಣ
ಕರೂಪ
ಈ ಸಲಹೆಯನ್ನು
ಮನ್ನಿಸಿದುದರ ಫಲವೇ ಈ ಪ್ರಯತ್ನ.

ಬೆಂಗಳೂರು ನಗರ,
೧೩-೭-೧೯೩೪.

ತಿ. ತಾತಾಚಾರ್ಯ ಶರ್ಮ,
ಸಂಪಾದಕ, 'ವಿಶ್ವಕರ್ಣಾಟಕ'.

ಮಹಾ ಮಾತೃಶ್ರೀ

ವಾಣೀವಿಲಾಸ ಸನ್ನಿಧಾನ

೧೮೯೪ರಲ್ಲಿ ಶ್ರೀಮಚ್ಚಾಮರಾಜೇಂದ್ರ ಒಡೆಯರವರು ಸ್ವರ್ಗಸ್ಥರಾದರಷ್ಟೆ. ಅಂದಿನಿಂದ ೮ ವರ್ಷಗಳ ಕಾಲ, ಅವಿಚ್ಛಿನ್ನವಾಗಿ ಶ್ರೀ ವಾಣೀ ವಿಲಾಸ ಸನ್ನಿಧಾನದವರು ಮೈಸೂರು ರಾಜ್ಯಾಡಳಿತ ಸೂತ್ರಗಳನ್ನು ಸ್ವತಃ ವಹಿಸಿ, ತಮ್ಮ ದೂರದೃಷ್ಟಿ, ರಾಜಕಾರ್ಯ ನೈಪುಣ್ಯತೆ ಮತ್ತು ದೇಶಭಕ್ತಿಗಳಿಂದ ಇಂದಿನ 'ಮಾದರಿಯ ಮೈಸೂರಿ'ಗೆ ತಕ್ಕ ಕ್ಷೇತ್ರ ಸಿದ್ಧತೆಯನ್ನು ಮಾಡಿ ಕೀರ್ತಿಭಾಜನರಾದರು. ಬ್ರಿಟಿಷ್ ಸರಕಾರದವರು ಇವರ ಆಡಳಿತ ವಿಚಕ್ಷಣೆಗಾಗಿ ಮೆಚ್ಚಿ 'ಸಿ. ಐ.' ಎಂಬ ಬಿರುದನ್ನು ಕೃಪೆ ಮಾಡಿದರು. ಇವರ ವ್ಯಕ್ತಿ ಶ್ರೇಷ್ಠತೆ ಮತ್ತು ಗೌರವವನ್ನು ಗಣಿಸಿ ಇವರಿಗೆ ೧೯ ಕುಶಾಲು ತೋಪಿನ ಮನ್ನಣೆಯನ್ನು ಕೊಟ್ಟರು. ಈ ಗೌರವವು ಅಸದಳವಾದುದು. ಸಾಮಾನ್ಯವಾಗಿ ಶ್ರೇಷ್ಠ ವರ್ಗದ ರಾಜ ಮಹಾರಾಜರಿಗೆ ಸಲ್ಲುವ ಮರ್ಯಾದೆ ಇದು. ಇದುವರೆಗೆ ಶ್ರೀ ವಾಣೀ ವಿಲಾಸ ಸನ್ನಿಧಾನದವರಿಗೆ ಸಂದ ಈ ಗೌರವವು ಅದೇ ಸಂದರ್ಭದಲ್ಲಿ ಮತ್ತಾರಿಗೂ ಸಿಗಲಿಲ್ಲವೆಂಬುದನ್ನು ಯಾರೂ ಮರೆಯಬಾರದು. ಈ ಗೌರವವು ಮೊದಲು ಅವರು 'ರೀಜೆಂಟ್'ರಾಗಿದ್ದಾಗ ದೊರೆಯಿತು. ಆದರೆ ಕಡೆಗೆ ಜೀವಾವಧಿ ಆ ಗೌರವ ಅವರಿಗೆ ಸಲ್ಲತಕ್ಕದ್ದೆಂದು ನಿರ್ಣಯಿಸಲ್ಪಟ್ಟಿತು.

ಮೈಸೂರಿನ ಭಾಗ್ಯಲಕ್ಷ್ಮಿ

ಆಳಿದ ಮಹಾಸ್ವಾಮಿ ಮುಮ್ಮಡಿ ಕೃಷ್ಣರಾಜ ಒಡೆಯರವರು ಅಸಹಾಯಶೂರರೆನಿಸಿ, ಕಾಲು ಶತಮಾನಗಳ ಮೇಲೆ ಮೈಸೂರಿನ ಸ್ವಾತಂತ್ರ್ಯ ಸ್ಥಾಪನೆಗಾಗಿ, ಒಡೆಯರ ಮನೆತನದ ಪುನರುದ್ಧಾರಕ್ಕಾಗಿ

ಹೋರಾಡಿ, ಸತ್ಯ ಪರಾಕ್ರಮಿಗಳೆನಿಸಿದರು. ತಮ್ಮ ಐಹಿಕ ಜೀವನ ವನ್ನು ಮುಗಿಸುವುದಕ್ಕೆ ಮೊದಲು (೭೪ ವಯಸ್ಸು) 'ಮೈಸೂರು ಸ್ವತಂತ್ರ ಸಂಸ್ಥಾನವಾಗಿ ಇರತಕ್ಕದ್ದು. ಯದುವಂಶದ ಒಡೆಯರ ಕುಲ ದೀಪಕರೇ ಶಾಶ್ವತವಾಗಿ ಕರ್ಣಾಟಕ ಸಿಂಹಾಸನವನ್ನು ಅಲಂಕರಿಸ ತಕ್ಕದ್ದು' ಎಂಬುದಾಗಿ ಬ್ರಿಟಿಷ್ ಸರಕಾರದವರು ಹೇಳಿದ್ದನ್ನು ಕಿವಿಯಾರ ಕೇಳಿ ಈ ವೃದ್ಧ ರಾಜರು ಇಹಲೋಕವನ್ನು ತ್ಯಜಿಸಿದರು.

ಈ ಮಂಗಳವಾರ್ತೆಯ ಸಂಕೇತವೋ ಎಂಬಂತೆ ಮೈಸೂರಿನ ಭಾಗ್ಯ ಲಕ್ಷ್ಮಿಯಹಾಗೆ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನದವರು ಪ್ರಖ್ಯಾತ ಕಳಲೆಯ ವಂಶದಲ್ಲಿ ಅದೇ ವರ್ಷ ಜನ್ಮಧಾರಣಮಾಡಿದರು. ೧೮೬೬ನೆಯ ಏಪ್ರಿಲ್ ತಿಂಗಳ ಅಂತ್ಯದಲ್ಲಿ ವಿಲಾಯಿತಿಯಿಂದ ಶುಭ ವಾರ್ತೆಯು ಬಂತು. ಅದೇ ೧೮೬೬ನೆಯ ಜುಲೈ ತಿಂಗಳ ಸುಮಾರಿನಲ್ಲಿ ಮಹಾಮಾತೃಶ್ರೀಯವರು ಹುಟ್ಟಿದರು. ಇವೆರಡೂ ಸುಖ, ಸುಂದರ ಸನ್ನಿವೇಶಗಳೂ ಏಕಕಾಲದಲ್ಲಿ ನಡೆದುದರ ರಹಸ್ಯವನ್ನು ಭಾವನಾಶಕ್ತಿ ಯುಳ್ಳವರೆಲ್ಲರೂ ಚಿತ್ರಿಸಿಕೊಳ್ಳಬಲ್ಲರು.

ಪೂರ್ವ ವೃತ್ತ

ಕಳಲೆಯ ವಂಶವು ಮೈಸೂರಿನ ರಾಜವರ್ಗದಲ್ಲಿ ಹೆಸರುವಾಸಿ ಯಾದುದು. ಈ ವಂಶದಲ್ಲಿ ಹುಟ್ಟಿದವರ ವೀರಪಟ್ಟಾವಳಿಯನ್ನು ಹಿಡಿದು ನೋಡಿದರೆ ಒಬ್ಬರನ್ನೊಬ್ಬರು ಮಿೂರಿಸುವಂತೆ ಹೆಸರುಗಳು ಕಣ್ಣಿಗೆ ಬೀಳುವುವು. ೧೯ನೆಯ ಶತಮಾನದ ಉತ್ತರಾರ್ಧಕ್ಕೆ ಬಂದರೂ ಸಹ 'ನಿರ್ವೀರ್ಯಮುರ್ವೀತಲಂ' ಎಂಬ ಪಲ್ಲವಿಯು ಆಸೇತು ಹಿಮಾಚಲದಲ್ಲಿ ಕೇಳಿಬರುತ್ತಿದ್ದಾಗ ಸಹ, ಇದೇ ಕಳಲೆ ವಂಶದಲ್ಲಿ ಮಹಾವ್ಯಕ್ತಿಗಳೆರಡರ ಜನ್ಮಧಾರಣವಾಯಿತು.

ವಾಣೀವಿಲಾಸ ಸನ್ನಿಧಾನದವರೇ ಆ ವ್ಯಕ್ತಿಗಳಲ್ಲೊಬ್ಬರು; ಇವರ ಸಹಜಾತರಾದ ಸರದಾರ್ ಸರ್ ಎಂ. ಕಾಂತರಾಜೇ ಅರಸಿನವರು ಮತ್ತೊಬ್ಬ ವ್ಯಕ್ತಿಗಳು. ಕಾಂತರಾಜೇ ಅರಸಿನವರು ಮೈಸೂರಿನ ಮಹಾಪ್ರಧಾನ (ದಿವಾನ್)ರಾಗಿದ್ದರು. ಮಹಾಮಾತೃಶ್ರೀಯವರು ೮ ವರ್ಷಗಳ ಕಾಲ

ಅವಿಚ್ಛಿನ್ನವಾಗಿ ರಾಜ್ಯಸೂತ್ರಗಳನ್ನು ಹಿಡಿದು ಭರತಖಂಡದ ನಾಯಕ ಮುಖ್ಯರನ್ನೆಲ್ಲ ಬೆರಗುಮಾಡಿದರು.

ಮಹಾಮಾತೃಶ್ರೀಯವರ ಪಿತೃವರ್ಯರು ಕಳಲೆ ನಂಜರಾಜೇ ಅರಸಿನವರು. ಶ್ರೀ ಗುಣಾಂಬಾ ದೇವಿಯವರು ಇವರ ಮಾತೃವರ್ಯರು. ಕೀರ್ತಿಶೇಷ ಕಾಂತರಾಜೇ ಅರಸಿನವರು ಇವರ ಹೆಸರನ್ನು ಆಚಂದ್ರಾರ್ಕವಾಗಿರಿಸಲು ಗರ್ಭಿಣೀ ಶಿಶು ಸಂಗೋಪನಾ ಮಂದಿರವೊಂದನ್ನು ರಾಜಧಾನಿಯಲ್ಲಿ ಸ್ಥಾಪಿಸಿರುವರು.

ಅನ್ನಪೂರ್ಣಾದೇವಿ

ಶ್ರೀಚಾಮರಾಜೇಂದ್ರ ಒಡೆಯರವರಿಗೆ ಸಹಧರ್ಮಿಣಿಯಾಗಿ ಮಹಾರಾಜ್ಞಿಪದವನ್ನು ಹೊಂದಲು ತಕ್ಕ ಶಿಕ್ಷಣವನ್ನೂ, ಕಲಾಸಂಸ್ಕಾರವನ್ನೂ, ಲೋಕಾನುಭವವನ್ನೂ ನಂಜರಾಜೇ ಅರಸಿನವರು ಮಗಳಿಗೆ ಕೊಡಿಸಿದರು. ಚಿಕ್ಕಂದಿನಿಂದಲೂ ಶ್ರೀಚಾಮರಾಜೇಂದ್ರ ಒಡೆಯರವರಿಗೇ ಇವರನ್ನು ಕೊಟ್ಟು ಉದ್ವಾಹಮಾಡಬೇಕೆಂಬ ಆಲೋಚನೆಯು ಉಭಯ ಗೋತ್ರದವರಲ್ಲೂ ಹುಟ್ಟಿ ಕಡೆಗೆ ಅದು ಸಫಲವೂ ಆಯಿತು.

ಧಾತು ಈಶ್ವರ ಕ್ಷಾಮ. ಭೂಮಿಯು ಮಳೆಯ ಹನಿಯನ್ನೇ ಕಂಡಿರಲಿಲ್ಲ. ಜನರಂತೂ ನೊಣಗಳು ಸೊಳ್ಳೆಗಳಂತೆ ಸಾವಿರಗಟ್ಟಲೆ ಹೊಟ್ಟೆಗಿಲ್ಲದೆ ಸಾಯುತ್ತಿದ್ದರು. ಇದರ ಫಲವಾಗಿ ಮೈಸೂರಿನ ಜನಸಂಖ್ಯೆಯು ಐದರಲ್ಲೊಂದಂಶವು ಕ್ಷೀಣವಾಗಿ ಹೋಯಿತು. ಎಲ್ಲೆಲ್ಲಿಯೂ ಹಾಹಾಕಾರ! ಮಣ್ಣು ತಿಂದ ಬಡಜನರ ಹೊಟ್ಟೆಗೆ ಅನ್ನಕೊಡಲಿಕ್ಕಾಗಿ ಮೈಸೂರು ಸರಕಾರದವರು ಲಕ್ಷಗಟ್ಟಲೆ ಸಾಲಮಾಡಿದ್ದರು. ಸುಮಾರು ಈ ಭಾರವು ಹತ್ತಿರ ಹತ್ತಿರ ೮೦ ಲಕ್ಷ ರೂಪಾಯಿಗಳಿಗೆ ಬಂತು.

ಉಭಯ ಪಕ್ಷದವರೂ ವಿವಾಹ ಕಾರ್ಯವನ್ನು ಆಗಗೊಳಿಸಬೇಕೆಂಬ ಕುತೂಹಲದಿಂದ ಇದ್ದರಾದರೂ ಕ್ಷಾಮಡಾಮರಗಳು ಕೊಂಚ ಅವರ ಆತುರಕ್ಕೆ ಅಡ್ಡಿಯಾಗಿ ನಿಂತುವು. ಇಷ್ಟಾದರೂ ಮಂಗಳ ಕಾರ್ಯವನ್ನು ಆದಷ್ಟು ಬೇಗ ಸಾಧಿಸಬೇಕೆಂಬ ಆತುರವು ಲಗ್ನವನ್ನು ನಿಷ್ಕರ್ಷೆಮಾಡಿತು. ಬಹುಧಾನ್ಯ ಸಂವತ್ಸರ ವೈಶಾಖ ಬಹುಳ ದಶಮೀ ಭಾನುವಾರ

(೨೬-೫-೧೮೭೮) ಸಿಂಹಲಗ್ನವು ನಿಷ್ಕರ್ಷೆಯಾಯಿತು. ದೈವಲೀಲೆಯನ್ನು ಯಾರು ಬಲ್ಲರು? ಧಾರೆಯ ಹಿಂದಿನ ದಿನ ರಾತ್ರಿ ಧಾರಾವರ್ಷವು ಸುರಿಯಲು ಮೊದಲಾಯಿತು. ದಣಿದ ನಾಡೆಲ್ಲಾ ತಣಿದುಹೋಯಿತು. ಸಸ್ಯ ಸಮೃದ್ಧಿಯಿಂದ ಭೂಮಿಯು ನಲಿಯತೊಡಗಿತು. ಫಲ ಪುಷ್ಪಗಳಿಂದ ಶುಷ್ಕ ವೃಕ್ಷಗಳು ತೂಗಿ ತೊನೆಯ ತೊಡಗಿದವು. ಬರಡು ಆಕಳುಗಳು ಸಮೃದ್ಧಿಯಾಗಿ ಕ್ಷೀರವನ್ನು ಕೊಡಲಾರಂಭಿಸಿದವು. ಇದನ್ನೆಲ್ಲ ನೋಡಿದರೆ ನಿಜವಾಗಿಯೂ ಮೈಸೂರಿನ ಪಾಲಿಗೆ ಶ್ರೀ ವಾಣೀವಿಲಾಸ ಸನ್ನಿಧಾನದವರು ಅನ್ನಪೂರ್ಣಾದೇವಿಯಂತೆಯೇ ಆವಿರ್ಭವಿಸಿದರೆಂದು ಹೇಳಬೇಕಾದೀತು. ಮುಂದೆ ಮೈಸೂರು ದೇಶವು ಹೇಗೆ ಅಭಿವೃದ್ಧಿಹೊಂದಿ ಜಗದಾಕರ್ಷಕವಾಗುವುದೆಂಬುದರ ಸೂಚನೆಯಂತೆ ತೋರಿತು ಈ ವಿವಾಹ.

ನಂದಗೋಕುಲ

ಶ್ರೀಮಚ್ಚಾಮರಾಜೇಂದ್ರ ಒಡೆಯರವರ ಭಾಗ್ಯವೇ ಭಾಗ್ಯ. ಮೈಸೂರಿನ ಭಾಗ್ಯವು ಇದಕ್ಕೆ ನೂರ್ಮಡಿಯೆನ್ನಬೇಕು. ೧೮೮೧ನೆಯ ಮಾರ್ಚಿ ತಿಂಗಳು ೨೫ರಲ್ಲಿ ಶ್ರೀ ಚಾಮರಾಜೇಂದ್ರ ಒಡೆಯರವರು ರಾಜ್ಯಸೂತ್ರಗಳನ್ನು ವಹಿಸಿದರು. ಅದರ ಸಂಕೇತವಾಗಿಯೋ ಏನೋ ಎಂಬಂತೆ ತಮ್ಮ ಜ್ಯೇಷ್ಠ ಸಂತಾನಕ್ಕೆ ಜಯಲಕ್ಷ್ಮಮ್ಮಣ್ಣಿಯೆಂಬುದಾಗಿ ನಾಮಕರಣ ಮಾಡಿದರು. ದ್ವಿತೀಯರು ಕೀರ್ತಿಶೇಷ ಕೃಷ್ಣಾಜಮ್ಮಣ್ಣಿಯವರು, ಕೀರ್ತಿಶೇಷ ದೇಶರಾಜೇ ಅರಸಿನವರ ಧರ್ಮಪತ್ನಿಯವರು. ತೃತೀಯರೇ ಆಳುವ ನಾಲ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರು. ನಾಲ್ಕನೆಯವರು ಶ್ರೀ ಚೆಲುವಾಜಮ್ಮಣ್ಣಿಯವರು, ಇವರೇ ಶ್ರೀ ಸರದಾರ್ ಲಕ್ಷ್ಮೀಕಾಂತರಾಜೇ ಅರಸಿನವರ ಸಹಧರ್ಮಿಣಿಯವರು. ಐದನೆಯವರು ಶ್ರೀಮದ್ಯುವರಾಜರವರು. ಇವರೆಲ್ಲರೂ ನಂದಗೋಕುಲಕ್ಕೆ ಸೇರಿದವರೇ. ಇವರಲ್ಲದೆ ರಾಜ ಒಡೆಯರು ಮತ್ತು ದೇವರಾಜ ಒಡೆಯರೆಂಬದಾಗಿ ಇಬ್ಬರು ಹುಟ್ಟಿ ಕೇವಲ ಶೈಶವದಲ್ಲೇ ಕಾಲವಾದರು. ಆದರೆ ಶ್ರೀ ವಾಣೀವಿಲಾಸದವರಿಗೆ ಈ ನಂದಗೋಕುಲದ ಸುಖಾನುಭವವು ದೀರ್ಘಕಾಲ ದಕ್ಕಲಿಲ್ಲ.

ಶೋಕಸಾಗರ

ಶ್ರೀಮಚ್ಚಾಮರಾಜ ಒಡೆಯರವರು ದೇಶಸಂಚಾರಾರ್ಥವಾಗಿ ಕಲಿಕತ್ತೆಯಲ್ಲಿರುವಾಗ ೨೮–೧೨–೧೮೯೪ನೆಯ ದಿನ ಅವರು ಕಂಠವ್ರಣಕ್ಕೆ ತುತ್ತಾದರು. ಮೈಸೂರು ದೇಶವನ್ನೇ ದುಃಖಸಾಗರದಲ್ಲಿ ಮುಳುಗಿಸಿ ಬಿಟ್ಟರು. ಮೈಸೂರಿನ ಅರಮನೆಯು ಶೋಕದ ಆಲವಾಲವಾಯಿತು. ಮೈಸೂರಿನ ಭಾಗ್ಯಸೂರ್ಯನು ಅಸ್ತಂಗತನಾದನು. ಕಾರ್ಮೋಡಗಳು ಕವಿದವು. ಎಲ್ಲವೂ ಸರ್ವನಾಶವಾದಂತೆ ಕಾಣಬಂತು. ಜನರು 'ಮತ್ತೆ ಮೈಸೂರು ಒಡೆಯರ ಕೈತಪ್ಪಿ ಎಲ್ಲಿ ಅನ್ಯಾಕ್ರಾಂತವಾಗುವುದೋ' ಎಂಬುದಾಗಿ ಭಯಭ್ರಾಂತರಾದರು.

ಮಕ್ಕಳಾದರೋ ಎಲ್ಲರೂ ಹಸುಳೆಗಳು. ೧೦ ವರ್ಷಕ್ಕೆ ಮೀರಿದ ಗಂಡು ಸಂತಾನವಿಲ್ಲ. ಅರಮನೆಯಲ್ಲಿ, ರಾಜವಂಶದಲ್ಲಿ, ದಕ್ಷಕರಿಲ್ಲ ವಾಯಿತು. ಮಹಾರಾಣಿಯವರಿಗೆ ಕೇವಲ ೨೭ ವಯಸ್ಸು! ಹೆಚ್ಚೇನು, ಅಂದು ಜಗತ್ತೆಲ್ಲ ಮಹಾರಾಣಿಯವರಿಗೆ ಶೂನ್ಯವಾಗಿ ಕಂಡುಬಂತು.

ರಾಜ್ಯಸೂತ್ರಗಳು

ಇಂತಹ ನಿರಾಶಾ ಸಮಯದಲ್ಲಿ, ದಗ್ಧಹೃದಯಾವಸ್ಥೆಯಲ್ಲಿ ವಾಣೀವಿಲಾಸ ಸನ್ನಿಧಾನದವರು ಮೈಸೂರು ಸಂಸ್ಥಾನದ ರಾಜ್ಯಸೂತ್ರಗಳನ್ನು ವಹಿಸಿದರು. ಕ್ಷತ್ರಿಯ ರಮಣಿಗುಚಿತವಾದ ಸ್ಥೈರ್ಯ ಧೈರ್ಯಗಳಿಂದ ರಾಜರಜ್ಜುಗಳನ್ನು ಹಿಡಿದು, ರಾಜ್ಯರಥವನ್ನು ಓಡಿಸುವುದಕ್ಕೆ ಆರಂಭಿಸಿದರು.

೧೮೦ ಲಕ್ಷ ರೂಪಾಯಿಗಳ ಸಾಲದ ಹೊರೆಯೊಂದು ಕಡೆ; ೨೪ ಲಕ್ಷದಿಂದ ೩೫ ಲಕ್ಷಕ್ಕೇರಿಸಿದ ಪೊಗದಿಯ ಭಾರ ಮತ್ತೊಂದು ಕಡೆ. ಜತೆಗೆ ಬಾಲಕಬಾಲಕಿಯರ ಶಿಕ್ಷಣ, ಪಾಲನ ಕರ್ಮದ ದೊಡ್ಡ ಜವಾಬ್ದಾರಿ ಮತ್ತೊಂದು ಕಡೆ. ಇವೆಲ್ಲವನ್ನೂ ಮಹಾಮಾತೃಶ್ರೀಯವರು ಅವರಿಗೆ ಸಹಜವಾದ ಸಾತ್ವಿಕ ಧೋರಣೆಯಿಂದ ಎದುರಿಸಿದರು.

ಇಷ್ಟೇ ಅಲ್ಲದೆ ಪ್ಲೇಗ್ ಮಾರಿಯು ತಲೆಹಾಕಿ ಊರೂರುಗಳನ್ನೇ ಗುಡಿಸುತ್ತಿದ್ದಳು. ಮಳೆ ಬೆಳೆಗಳಿಲ್ಲದೆ ಸಂಸ್ಥಾನದ ವರಮಾನವು ೪–೫ ಲಕ್ಷ ರೂಪಾಯಿಗಳವರೆಗೆ ಬಿದ್ದುಹೋಯಿತು. ಎಲ್ಲವೂ ವಿರುದ್ಧ ಪ್ರಕೃತಿಗಳೇ

ಇವರ ಆಡಳಿತದಲ್ಲಿ ಪಿತೂರಿ ನಡೆಸಿ ಎದ್ದುನಿಂತಂತೆ ತೋರಿತು. ಇಷ್ಟೇ ಸಾಲದೆಂದು ಒಂದರ ಹಿಂದೊಂದರಂತೆ ಶುಭಕಾರ್ಯಗಳ ವೆಚ್ಚ ಬೇರೆ! ಏನಾದರೇನು? ವಾಣೀವಿಲಾಸದವರು ಇವೆಲ್ಲವನ್ನೂ ಎದುರಿಸಿದರು. ಅವರ ಕ್ರಿಯಾಶಕ್ತಿಯ ಮುಂದೆ ಎಲ್ಲ ತೊಡಕುಗಳೂ, ಸಮಸ್ಯೆಗಳೂ, ಕಾರ್ಪೋಡಗಳೂ ಕರಗಿಹೋದವು. ಭಾರತ ರಮಣಿಯರು ಇಂತಹ ಅಪೂರ್ವ ಸಂದರ್ಭಗಳಲ್ಲಿ ಎಷ್ಟುಮಟ್ಟಿಗೆ ಕಾರ್ಯನಿರ್ವಾಹಮಾಡಬಲ್ಲರು; ಭಾರತ ರಮಣಿಯರ ಸತ್ವ ಕ್ಷಾತ್ರಗಳ ಮಿತಿಯೇನು ಎಂಬುದನ್ನು ಜಗತ್ತಿಗೇ ತೋರಿಸಿಕೊಟ್ಟರು. ನಿಜವಾಗಿಯೂ ಈ ನಾಡು ಪೌರಾಣಿಕ ಯುಗದ ಸೀತಾ, ಸಾವಿತ್ರೀ, ದ್ರೌಪದಿ ಇವರ ಮಾತು ಹಾಗಿರಲಿ; ಝಾನ್ಸಿ ಲಕ್ಷ್ಮೀಬಾಯಿ, ಅಹಲ್ಯಾಬಾಯಿ, ಚಾಂದ್‌ಬೀಬಿ, ಪದ್ಮಿನೀ ಮುಂತಾದ ಐತಿಹಾಸಿಕ ಯುಗದ ಮಹಾವಿಭೂತಿಗಳ ಮಾತೃಭೂಮಿ ಎಂಬುದು ವಾಣೀವಿಲಾಸ ಮಹಾ ಮಾತೃಶ್ರೀಯವರು ತಮ್ಮ ಸ್ವಸಾಮರ್ಥ್ಯದಿಂದ ನಿಜಮಾಡಿ ತೋರಿಸಿದರು.

ಸೇವಾ ಜೀವನ

ಪ್ರತಿವರ್ಷವೂ ಸಾವಿರಗಟ್ಟಲೆಯಾಗಿ ಯಾವ ಚಿಕಿತ್ಸಾಗಾರದಲ್ಲಿ ರೋಗಿಗಳು ಬಂದು ಜೀವನ ಶಾಂತಿಯನ್ನೂ, ದೇಹಶಾಂತಿಯನ್ನೂ ಪಡೆದು ಹೋಗುವರೋ ಅಂತಹ ವಿಕ್ಟೋರಿಯಾ ಆಸ್ಪತ್ರೆಯು (ಬೆಂಗಳೂರು) ಮಹಾ ಮಾತೃಶ್ರೀಯವರ ಸೇವಾ ಜೀವನದ ಫಲ. ಶಿವನಸಮುದ್ರದ ವಿದ್ಯುಚ್ಛಕ್ತಿಯ ಉತ್ಪತ್ತಿ ಯಂತ್ರಾಗಾರ ಸ್ಥಾಪನೆಯು ಅವರ ದೂರ ದೃಷ್ಟಿಯ ಫಲ. ಅವರು ಕೊಟ್ಟ ಬೆಳಕೇ ಇಂದು ಮೈಸೂರಿನ ೬೫ ಲಕ್ಷ ಪ್ರಜೆಗಳು ಅನುಭವಿಸುತ್ತಿರುವ ಜೀವನದ ಬೆಳಕು! ಅವರು ಕೊಟ್ಟ ಅಶ್ವಶಕ್ತಿಯೇ ಇಂದು ಮೈಸೂರಿನ ಎಲ್ಲ ಉದ್ಯಮಗಳ ಯಂತ್ರಗಳನ್ನು ನಡೆಸುತ್ತಿರುವ ಅಶ್ವಶಕ್ತಿ! ನಾಡನ್ನು ಸಸ್ಯ ಸಮೃದ್ಧಿಯನ್ನಾಗಿ ಮಾಡಿ ಬೋರೇಗೌಡನ ಹೊಟ್ಟೆಗೆ ಹಿಟ್ಟನ್ನೂ, ಕಣ್ಣಿಗೆ ನಿದ್ದೆಯನ್ನೂ, ಸಾಕಾದಷ್ಟು ಶಾಂತಿಯನ್ನೂ ಕೊಡುವ ಒಂದೇ ಉದ್ದೇಶದಿಂದ ಮಹಾ ಮಾತೃಶ್ರೀಯವರು ಮಾರೀಕಣಿವೆ ಮುಂತಾದ ಅನೇಕ ಸರೋವರ ಗಳನ್ನೂ, ನಾಲಾ ಕೆಲಸಗಳನ್ನೂ ಆರಂಭಿಸಿದರು.

ಶಿಕ್ಷಣ ವಿಸ್ತಾರಕ್ಕಾಗಿ ಅದರಲ್ಲೂ ಸ್ತ್ರೀ ಶಿಕ್ಷಣ ಸೌಧ ನಿರ್ಮಾಣಕ್ಕಾಗಿ ಅವರು ತೋರಿಸಿದ ದೂರದೃಷ್ಟಿಯುತವಾದ ಸಾಹಸವು ಇಂದಿಗೂ ನಾಗರಿಕರನ್ನು ಕೂಡ ನಾಚಿಸುವಂತಹುದಾಗಿದೆ. ಮೈಸೂರಿನ ಮಹಾರಾಣಿ 'ಕಾಲೇಜ್' ಒಂದೇ ಸಾಕು, ಅವರ ಹೆಸರನ್ನು ಶಾಶ್ವತಗೊಳಿಸಲಿಕ್ಕೆ. ಅವರು ಅಂದು ಯಾವ ಪರಮೋದ್ದೇಶ ಸಾಧನೆಗಾಗಿ ಈ ಪವಿತ್ರ ಕರ್ತವ್ಯಕ್ಕೆ ಕೈಹಾಕಿದರೋ ಆ ಉದ್ದೇಶವು ತಮ್ಮ ಸಂತಾನದ ಆಳ್ವಿಕೆಯಲ್ಲಿ ಸಾರ್ಥಕವಾದುದನ್ನು ಕಣ್ಣಾರಕಂಡು ಆನಂದಪಟ್ಟರು. ಸ್ತ್ರೀಪುರುಷರಿಬ್ಬರಿಗೂ ಐಹಿಕ ಸುಖ ಸಂಪದಗಳಲ್ಲಿ ಸಮಾನ ಸ್ಥಾನ ಮಾನಗಳಿರಬೇಕೆಂಬ ಶಾಸನವೊಂದಕ್ಕೆ ರಾಜಮುದ್ರೆಯು (ಕಳೆದ ವರ್ಷ) ಬಿದ್ದುದನ್ನು ಕಂಡು ಅವರಿಗೆ ಮಹದಾನಂದವಾಗಿರಬೇಕು.

ಲಾರ್ಡ್ ಕರ್ಜನರ ಪ್ರಶಸ್ತಿ

೧೯೦೨ರಲ್ಲಿ ನಾಲ್ಮಡಿ ಶ್ರೀ ಕೃಷ್ಣರಾಜ ಒಡೆಯರವರಿಗೆ ರಾಜ್ಯ ಸೂತ್ರಗಳನ್ನು ವಹಿಸಿಕೊಡುವುದಕ್ಕಾಗಿ ವೈಸರಾಯ್ ಲಾರ್ಡ್ ಕರ್ಜನ್‌ರವರು ಮೈಸೂರಿಗೆ ಬಂದರು. ಆ ಸಮಯದಲ್ಲಿ ಮಹಾ ಮಾತೃಶ್ರೀಯವರ ಪ್ರಭುತ್ವ ವೈಖರಿಯನ್ನು ಕುರಿತು, ಅವರು ಕೊಟ್ಟ ಪ್ರಶಸ್ತಿಯನ್ನು ಆಲಿಸಿ:

"ಇಂಡಿಯಾ ಸರಕಾರದ ಪ್ರಧಾನ ಅಧಿಕಾರ ವಾಣಿಯಿಂದ ಈ ಮಾತುಗಳನ್ನು ಹೇಳಲು ನನಗೆ ಪರಮ ಸಂತೋಷವಾಗುತ್ತದೆ. ಶ್ರೀಮನ್ ಮಹಾರಾಜರ ಬಾಲ್ಯ ಕಾಲದಲ್ಲಿ ಮೈಸೂರಿನ ಆಡಳಿತವು ಇಷ್ಟು ಸುಸೂತ್ರವಾಗಿ ನಡೆದು, ಅಭಿವೃದ್ಧಿ ಮಾರ್ಗವನ್ನು ಮೆಟ್ಟಿರುವುದನ್ನು ಕಂಡರೆ ಬಹಳ ಸಂತೋಷವಾಗುತ್ತದೆ. ಇದಕ್ಕೆಲ್ಲ ಮಹಾ ಮಾತೃಶ್ರೀಯವರ ವಿವೇಕವೂ ಮತ್ತು ಅಸದೃಶ ಕೌಶಲವೂ ಮೂಲಕಾರಣವೆಂದು ನಾನು ಹೇಳಬಲ್ಲೆ. ಒಂದು ಮಾತಿನಲ್ಲಿ ನಾನು ಹೇಳಬಹುದಾದರೆ ಶ್ರೀಮನ್ಮಹಾರಾಣಿಯವರು ಸಾರ್ವಜನಿಕ ಜೀವನದ ಶೀಲವು ಹೇಗಿರಬೇಕು; ಅಂತರಂಗ ಶೀಲವು ಹೇಗಿರಬೇಕು ಎಂಬುದಕ್ಕೆ ಪರಮೋತ್ತಮ ಉದಾಹರಣೆಯಾಗಿ ತಾವೇ ನಿಂತಿದ್ದಾರೆ. ಇದರಿಂದ ಮೈಸೂರಿನ ಪ್ರಜಾ

ಕೋಟಿಗೂ ರಾಜಮನೆತನಕ್ಕೂ ಅನಂತ ಅಪಾರ ಸುಖ ಸಂತೋಷಗಳು ಪ್ರಾಪ್ತವಾದುವೆಂಬುದರಲ್ಲಿ ಸಂದೇಹವಿಲ್ಲ. ಈ ಶುದ್ಧ ಮತ್ತು ಸಿದ್ಧ ಶೀಲವು ವಿಶಾಲ ಲೋಕದ ಆಶ್ಚರ್ಯ ಮತ್ತು ಗೌರವಗಳನ್ನು ಮಹಾರಾಣಿಯವರಿಗೆ ಗಳಿಸಿಕೊಟ್ಟಿವೆ."

ವಾನಪ್ರಸ್ಥಾಶ್ರಮ

೧೯೦೨ರ ಅನಂತರ ಪ್ರಾಪ್ತವಯಸ್ಕರಾದ ನಾಲ್ಮಡಿ ಶ್ರೀ ಕೃಷ್ಣ ಭೂಪಾಲರಿಗೆ ರಾಜ್ಯಸೂತ್ರಗಳನ್ನು ವಹಿಸಿಕೊಟ್ಟು ತಾವು ವಾನಪ್ರಸ್ಥವನ್ನು ಸ್ವೀಕರಿಸಿದರು. ಎಲ್ಲ ಸಾರ್ವಜನಿಕ ಕೆಲಸಗಳನ್ನು ಬಿಟ್ಟುಕೊಟ್ಟರು. ಸತ್ಕಾಲಕ್ಷೇಪದಲ್ಲಿ ನಿರತರಾದರು.

ಮಹಾ ಮಾತೃಶ್ರೀಯವರು ಬಹಳವಾಗಿ ವಿಶಾಲ ಜಗತ್ತನ್ನು ಕಂಡರು. ಎಲ್ಲ ಸುಖ ದುಃಖಗಳನ್ನು ಸಮವಾಗಿ ಅನುಭವಿಸಿದರು. ಲಾಭಾಲಾಭಗಳನ್ನು ಗಣಿಸಲಿಲ್ಲ. ಜೀವನವನ್ನೆಲ್ಲ ಅನಾಸಕ್ತ ಯೋಗಿಗಳಂತೆ ತಳ್ಳಿದರು. ಹುಟ್ಟಿದ ಕುಲಕ್ಕೂ, ಸೇರಿದ ಕುಲಕ್ಕೂ, ದೇಶಕ್ಕೂ, ವಿಶಾಲ ಭಾರತಕ್ಕೂ ಕೀರ್ತಿಯನ್ನು ತಂದರು. ಕಡೆಗೆ ಪರಮಾತ್ಮನಲ್ಲಿ ಶಾಂತಚಿತ್ತದಿಂದ ಐಕ್ಯರಾದರು. ಆದರೆ ೬೫ ಲಕ್ಷ ಪ್ರಜೆಗಳಿಂದು ತಾಯಿ ಇಲ್ಲದೆ ಅನಾಥರಾದರು.

...ರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟರಾದ
...ಹ್ಮಣ್ಯ ಅಯ್ಯರವರಿಂದ ಮುದ್ರಿಸಲ್ಪಟ್ಟಿತು.

The
BANGALORE
PRESS
LAKE VIEW
MYSORE RD
BANGALORE
CITY